ಫ್ಯಾಕ್ಸ್/Fax : 080-25586321
ಈಮೇಲ್/E-mail : ho@kspcb.gov.in
ವೆಬ್‌ಸೈಟ್/Website : http://kspcb.gov.in

25581383, 25589112
25588151, 25588270
25588142, 25586520

# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
# Karnataka State Pollution Control Board

"ಪರಿಸರ ಭವನ", 1 ರಿಂದ 5ನೇ ಮಹಡಿಗಳು, ನಂ. 49, ಚರ್ಚ್ ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ, ಭಾರತ
"Parisara Bhavana", 1st to 5th Floor, # 49, Church Street, Bengaluru - 560 001, Karnataka, INDIA

ಸಂಖ್ಯೆ: ಮಾನಿಮ 26 ಆಡಅ 2017/ 2453 ದಿನಾಂಕ: 28 NOV 2017

**ಅಧಿಸೂಚನೆ**

**ವಿಷಯ**: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿನ ಮುಖ್ಯ ಪರಿಸರ ಅಧಿಕಾರಿ ವೃಂದದ ಅಂತಿಮ ಸೇವಾ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

**ಉಲ್ಲೇಖ**: 1. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಇವರ ಪತ್ರದ ಸಂಖ್ಯೆ: ಸಿಆಸುಇ 182 ಸೇಹನಿ 2011 ದಿನಾಂಕ: 06.05.2017.
2. ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ದಿನಾಂಕ: 09.02.2017 (Civil Appeal No. 2368 of 2011).
3. ಮಂಡಳಿಯ ಅಧಿಸೂಚನೆಯ ದಿನಾಂಕ: 06-09-2017.

*******

ಮಾನ್ಯ ಸರ್ವೋಚ್ಛ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ: 2368/2011 ಬಿ.ಕೆ. ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ದಿನಾಂಕ: 09.02.2017 ರಂದು ನೀಡಿರುವ ತೀರ್ಪಿನಲ್ಲಿ Karnataka Determination of Seniority of the Government servants promoted on the basis of Reservation (to the posts in the civil services of the state) Act 2002 ರ ಸೆಕ್ಷನ್ 3 ಮತ್ತು 4 ಅನ್ನು Ultra vires Articles 14 and 16 of the constitution ಎಂದು ಕಾನೂನನ್ನು ಪ್ರಚುರ ಪಡಿಸಿದೆ.

ಮಾನ್ಯ ಸರ್ವೋಚ್ಛ ನ್ಯಾಯಾಲಯವು ಬಿ.ಕೆ. ಪವಿತ್ರ ಪ್ರಕರಣದಲ್ಲಿ ದಿನಾಂಕ: 09.02.2017 ರಂದು ನೀಡಿದ ತೀರ್ಪಿನ ಹಿನ್ನಲೆಯಲ್ಲಿ ದಿನಾಂಕ: 27.04.1978ರ ಸರ್ಕಾರಿ ಆದೇಶದನ್ವಯ ಮುಂಬಡ್ತಿ ಮೀಸಲು ಅನ್ವಯವಾಗುವ ವೃಂದಗಳಿಗೆ ಮುಂಬಡ್ತಿ ನೀಡಿ ಪರಿಣಾಮವಾಗಿ ಲಭ್ಯವಾಗುವ ಜೇಷ್ಠತೆಯನ್ನು ನಿಗಧಿಪಡಿಸಿ ಪ್ರಕಟಿಸಿರುವ ಜೇಷ್ಠತಾ ಪಟ್ಟಿಗಳನ್ನು ಪುನರಾವಲೋಕನೆ ಮಾಡಲು ಸರ್ಕಾರ ದಿನಾಂಕ: 06.05.2017 ರ ಉಲ್ಲೇಖ (1) ರ ಆದೇಶದಲ್ಲಿ ಮಾರ್ಗಸೂಚಿಗಳನ್ನು ನೀಡಿರುತ್ತದೆ.

ಮೇಲ್ಕಂಡ ಹಿನ್ನಲೆಯಲ್ಲಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿನ ಮುಖ್ಯ ಪರಿಸರ ಅಧಿಕಾರಿ ವೃಂದದವರ ಅಂತಿಮ ಜೇಷ್ಠತಾ ಪಟ್ಟಿಯನ್ನು ಪುನರಾವಲೋಕನೆ ಮಾಡಿ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು, 1957 ರ ನಿಯಮ 10 ರನ್ವಯ, ಅನುಬಂಧದಲ್ಲಿರುವಂತೆ ಮಂಡಳಿಯ ಮುಖ್ಯ ಪರಿಸರ ಅಧಿಕಾರಿಗಳ ವೃಂದಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಉಲ್ಲೇಖಿತ (3) ರ ಅಧಿಸೂಚನೆಯಲ್ಲಿ ಪ್ರಕಟಿಸಿ, ಭಾದಿತ ಅಧಿಕಾರಿ/ನೌಕರರಿಂದ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿರುತ್ತದೆ. ನಿಗದಿತ ಅವಧಿಯಲ್ಲಿ ಸ್ವೀಕೃತವಾದ ಆಕ್ಷೇಪಣೆಗಳನ್ನು ನಿಯಮಾನುಸಾರ ಪುನರಾವಲೋಕಿಸಿ, ಅನುಬಂಧದಲ್ಲಿರುವಂತೆ ಉತ್ತರಿಸಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿನ ಮುಖ್ಯ ಪರಿಸರ ಅಧಿಕಾರಿಗಳ ಅಂತಿಮ ಸೇವಾ ಜೇಷ್ಠತಾ ಪಟ್ಟಿಯನ್ನು ಈ ಮೂಲಕ ಅಧಿಸೂಚಿಸಲಾಗಿದೆ.

28/11/17
ಅಧ್ಯಕ್ಷರು
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

.........2

**ಪ್ರತಿಗಳು:**

1) ಸರ್ಕಾರದ ಕಾರ್ಯದರ್ಶಿಯವರು, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರ ಘನ ಅವಗಾಹನೆಗಾಗಿ.
2) ಮಾನ್ಯ ಅಧ್ಯಕ್ಷರ ಆಪ್ತ ಸಹಾಯಕರಿಗೆ, ಅವರ ಗಮನಕ್ಕೆ ತರುವ ಸಲುವಾಗಿ.
3) ಸದಸ್ಯ ಕಾರ್ಯದರ್ಶಿಯವರ ಆಪ್ತ ಸಹಾಯಕರಿಗೆ, ಅವರ ತಮನಕ್ಕೆ ತರುವ ಸಲುವಾಗಿ.
4) ಮಂಡಳಿಯ ಮುಖ್ಯ ಹಾಗೂ ಹಿರಿಯ ಪರಿಸರ ಅಧಿಕಾರಿಗಳ ಮಾಹಿತಿಗಾಗಿ.
5) ಮಂಡಳಿಯ ಮುಖ್ಯ ಹಾಗೂ ಹಿರಿಯ ವೈಜ್ಞಾನಿಕ ಅಧಿಕಾರಿಗಳ ಮಾಹಿತಿಗಾಗಿ.
6) ಮಂಡಳಿಯ ಎಲ್ಲಾ ಪ್ರಾದೇಶಿಕ ಕಛೇರಿಗಳಲ್ಲಿನ ಅಧಿಕಾರಿ/ನೌಕರರ ಮಾಹಿತಿಗಾಗಿ.
7) ಮಂಡಳಿಯ ಎಲ್ಲಾ ಪ್ರಾದೇಶಿಕ ಪ್ರಯೋಗಾಲಯಗಳಲ್ಲಿನ ಅಧಿಕಾರಿ/ನೌಕರರ ಮಾಹಿತಿಗಾಗಿ.
8) ನಿಗಮಿತ ಕೋಶ ಹಾಗೂ ಕಾನೂನು ಕೋಶ, ಇವರುಗಳ ಮಾಹಿತಿಗಾಗಿ.
9) ಇ-ಆಡಳಿತ ಶಾಖೆಗೆ ಮಂಡಳಿಯ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲು.
10) ಸೂಚನಾ ಫಲಕ/ಇತರೆ.

**ವಿಶೇಷ ಸೂಚನೆ:** ಮಂಡಳಿಯ ಎಲ್ಲಾ ಪ್ರಾದೇಶಿಕ ಕಛೇರಿಗಳ ಮುಖ್ಯಸ್ಥರು ಮತ್ತು ಪ್ರಾದೇಶಿಕ ಪ್ರಯೋಗಾಲಯಗಳಲ್ಲಿನ ಮುಖ್ಯಸ್ಥರು ಕಡ್ಡಾಯವಾಗಿ ತಮ್ಮ ತಮ್ಮ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ನೌಕರರ ಗಮನಕ್ಕೆ ತರಲು ಸೂಚಿಸಿದೆ ಹಾಗೂ ಅನುಬಂಧದಲ್ಲಿ ಲಗತ್ತಿಸಿರುವ ಅಂತಿಮ ಜೇಷ್ಠತಾ ಪಟ್ಟಿಗಳನ್ನು ಮಂಡಳಿಯ ಅಧಿಕೃತ ಜಾಲತಾಣ www.kspcb.gov.in ರಲ್ಲಿ ಡೌನಲೋಡ್ ಮಾಡಿಕೊಳ್ಳಲು ಸೂಚಿಸತಕ್ಕದ್ದು.

**<u>ದಿನಾಂಕ: 01-01-2017 ರಲ್ಲಿದ್ದಂತೆ ಮುಖ್ಯ ಪರಿಸರ ಅಧಿಕಾರಿಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ದಿನಾಂಕ 9.2.2017 (CIVIL APPEAL NO. 2368 OF 2011) ರ ಅನ್ವಯ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಪ್ರಕಟಿಸಲಾಗಿದೆ.</u>**

| ಕ್ರಮ ಸಂಖ್ಯೆ | ಅಧಿಕಾರಿಯ ಹೆಸರು | ಪಜಾ/ ಪಪಂ | ಹುಟ್ಟಿದ ದಿನಾಂಕ | ಹಿರಿಯ ಪರಿಸರ ಅಧಿಕಾರಿ ಹುದ್ದೆಗೆ ಆದೇಶ ಹೊರಡಿಸಿದ ದಿನಾಂಕ | ಹಿರಿಯ ಪರಿಸರ ಅಧಿಕಾರಿ ಹುದ್ದೆಗೆ ಹಾಜರಾದ ದಿನಾಂಕ | ಮುಖ್ಯ ಪರಿಸರ ಅಧಿಕಾರಿ ಹುದ್ದೆಗೆ ಆದೇಶ ಹೊರಡಿಸಿದ ದಿನಾಂಕ | ಮುಖ್ಯ ಪರಿಸರ ಅಧಿಕಾರಿ ಹುದ್ದೆಗೆ ಹಾಜರಾದ ದಿನಾಂಕ | ವಿವರ |
|---|---|---|---|---|---|---|---|---|
| 1. | ಎಂ.ಡಿ,ಎನ್ . ಸಿಂಹ | | 27.05.1953 | 17.06.1995 | 16.04.1993 | 01.09.2009 | 02.09.2009 | ವಯೋನಿವೃತ್ತಿ ಹೊಂದಿರುತ್ತಾರೆ |
| 2. | ಪಿ.ಎನ್.ಸಿರಸಿ | | 05.08.1951 | 19.07.2006 | 21.04.2006 | 06.04.2010 | 08.04.2010 | ವಯೋನಿವೃತ್ತಿ ಹೊಂದಿರುತಾ |
| 3. | ಎಂ.ಎನ್. ಜಯಪ್ರಕಾಶ್ | | 26.10.1952 | 19.07.2006 | 21.04.2006 | 09.04.2012 | 09.04.2012 | ವಯೋನಿವೃತ್ತಿ ಹೊಂದಿರುತ್ತಾರೆ |
| 4. | ಎಸ್.ನಂದ ಕುಮಾರ್ | | 10.12.1956 | 01.10.2008 | 06.10.2008 | 16.12.2016 | 16.12.2016 | ವಯೋನಿವೃತ್ತಿ ಹೊಂದಿರುತ್ತಾರೆ |
| 5. | ಬಿ.ಜಿ.ಮೋಹನ್ ಕೃಷ್ಣ | | 23.03.1959 | 01.10.2008 | 01.10.2008 | 16.12.2016 | 16.12.2016 | |
| 6. | ಬಿ.ಎನ್.ರಮೇಶ್ ಕುಮಾರ್ | | 28.06.1959 | 01.10.2008 | 03.10.2008 | 31.12.2016 | 31.12.2016 | |

28/11/17
ಅಧ್ಯಕ್ಷರು
ಕ.ರಾ.ಮಾ.ನಿ.ಮಂ.

**ಅನುಬಂಧ**

**ಮುಖ್ಯ ಪರಿಸರ ಅಧಿಕಾರಿ**

| | | | |
|---|---|---|---|
| 1 | ಶ್ರೀ ಕುಮಾರಸ್ವಾಮಿ ಡಿ.ಆರ್ ಮುಖ್ಯ ಪರಿಸರ ಅಧಿಕಾರಿ(ಸ್ವತಂತ್ರ ಪ್ರಭಾರ) | ಉಲ್ಲೇಖ ಅಧಿಸೂಚನೆಯಲ್ಲಿ ಪ್ರಕಟಿಸಿರುವ ದಿನಾಂಕ:01.01.2017 ರಲ್ಲಿ ಇದ್ದಂತೆ, ಹಿರಿಯ ಪರಿಸರ ಅಧಿಕಾರಿಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ನನ್ನ ಹೆಸರನ್ನು ಕ್ರಮಸಂಖ್ಯೆ 11 ರಲ್ಲಿ ನಮೂದಿಸಲಾಗಿದೆ.<br>ಈ ಕೆಳಗೆ ನಮೂದಿಸಿರುವಂತೆ ಆಕ್ಷೇಪಣೆಗಳನ್ನು ಪರಿಗಣನೆಗೆ ಒಪ್ಪಸಲಾಗಿದೆ.<br>1. **ಸಿವಿಲ್ ಅಪೀಲು ಸಂಖ್ಯೆ:2368/2011** ರಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳ **ಜೇಷ್ಠತಾ ಪಟ್ಟಿಯು** ಪ್ರಶ್ನಿತವಾಗಿರಲಿಲ್ಲ.ಸರ್ವೋಚ್ಛ ನ್ಯಾಯಾಲಯದಲ್ಲಿ ಕನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳ ಜೇಷ್ಠತಾ ಪಟ್ಟಿಗಳು ಪ್ರಶ್ನಿತವಾಗಿರಲಿಲ್ಲ. ಸದರಿ ತೀರ್ಪನ್ನು ಆಧರಿಸಿ ನನ್ನ ಜೇಷ್ಠತೆಯನ್ನು ವ್ಯತಿರಿಕ್ತವಾಗಿ ಕಡಿಮೆ ಮಾಡಿರುವುದು ನಿಯಮಬಾಹಿರವಾಗಿದೆ.<br>**2. ಸಿವಿಲ್ ಅಪೀಲು ಸಂಖ್ಯೆ :2368/2011** ರಲ್ಲಿ ನಾನು ಪ್ರತಿವಾದಿಯಾಗಿರುವುದಿಲ್ಲ . ಸರ್ವೋಚ್ಛ ನ್ಯಾಯಾಲಯದಲ್ಲಿ ದಾಖಲಾಗಿದ್ದ ಸಿವಿಲ್ ಅಪೀಲು ಸಂಖ್ಯೆ :2368/2011 ರಲ್ಲಿ ಬಿ.ಕೆ ಪವಿತ್ರ ಮತ್ತು ಕೇಂದ್ರ ಸರ್ಕಾರ ಹಾಗೂ ಇತರರು ಪ್ರತಿವಾದಿಗಳಾಗಿದ್ದು , ನಾನೂ ಅದರಲ್ಲಿ ಪ್ರತಿವಾದಿಯಾಗಿರುವುದಿಲ್ಲ. ಯಾವುದೇ ಪ್ರಕರಣದಲ್ಲಿ ಪ್ರತಿವಾದಿಯಾಗದೇ **ಇರುವವರ ವಿರುದ್ಧ ಆ ತೀರ್ಪಿನ ಅಂಶಗಳನ್ನು ಜಾರಿಗೊಳಿಸಲು ಅವಕಾಶ ಇರುವುದಿಲ್ಲ.**<br>3. **ಸರ್ಕಾರದ ಆದೇಶ ಸಂಖ್ಯೆ:ಡಿಪಿಎಆರ್182 ಎಆರ್ಆರ್ 2011, ದಿನಾಂಕ :06-05-2017 ರಲ್ಲಿ ನೀಡಿರುವ ನಿರ್ದೇಶನಗಳು ಕರ್ನಾಟಕ ಸಿವಿಲ್ ಸೇವಾ (ಜೇಷ್ಠತಾ) ನಿಯಮಗಳು , 1957 ರ 2ನೇ ನಿಯಮದ (ಸಿ) ಖಂಡಕ್ಕೆ ವ್ಯತಿರಿಕ್ತವಾಗಿದೆ.** ಸರ್ಕಾರದ ಆದೇಶಗಳಲ್ಲಿ ನಿಯಮಗಳಿಗೆ ವ್ಯತಿರಿಕ್ತವಾದ ಉಪಬಂಧಗಳನ್ನು ಅಳವಡಿಸಲು ಅವಕಾಶ ಇರುವುದಿಲ್ಲ . ಬಿ.ಎನ್ ನಾಗರಾಜನ್ ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು ,ಎಐಆರ್ 1979 ಎಸ್ಸಿ 1676:1979 ಎಲ್ಎಬಿ.ಐಸಿ 1206 ನೋಡಬಹುದು. ಜೇಷ್ಠತಾ ನಿಯಮಗಳಲ್ಲಿ ಜೇಷ್ಠತೆಗಾಗಿ ಹುದ್ದೆಯ ಸೇವೆಯನ್ನು ಪರಿಗಣಿಸಬೇಕಾಗಿದೆ.<br>ನಾನು ಸಹಾಯಕ ಪರಿಸರ ಅಧಿಕಾರಿಯಾಗಿ ಪದೋನ್ನತಿ ಹೊಂದಿರುತ್ತೇನೆ. ಜ್ಞಾಪನಪತ್ರ ಸಂಖ್ಯೆ:ಮಾನಿಮ347 ಆಡಎ 07/1876, ದಿನಾಂಕ:01-10-2008 ರಲ್ಲಿ ಹಿರಿಯ ಪರಿಸರ ಅಧಿಕಾರಿಯಾಗಿ ಬಡ್ತಿ ಹೊಂದಿರುತ್ತೇನೆ. ಹಿರಿಯ ಪರಿಸರ ಅಧಿಕಾರಿಯಾಗಿ ಕಾರ್ಯವರದಿ | ಮಾನ್ಯ ಸರ್ವೋಚ್ಛ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ: 2368/2011 ಬಿ.ಕೆ. ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ದಿನಾಂಕ: 09.02.2017 ರಂದು ನೀಡಿರುವ ತೀರ್ಪಿನಂತೆ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಇವರ ಪತ್ರದ ಸಂಖ್ಯೆ: ಸಿಆಸುಇ 182 ಸೇಹಿನಿ 2011 ದಿನಾಂಕ: 06.05.2017 ರಲ್ಲಿನ ಮಾರ್ಗಸೂಚಿಗಳನ್ವಯ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದೆ. |

28/11/17

ಮಾಡಿಕೊಂಡಿರುವ ಅವಧಿಯನ್ನು ಅಂದರೆ, ದಿನಾಂಕ:01-10-2008 ರಿಂದ ಸದರಿ ಹುದ್ದೆಯನ್ನು ಜೇಷ್ಠತೆಗಾಗಿ ಪರಿಗಣಿಸಬೇಕಾಗಿದೆ.

ಹಿರಿಯ ಪರಿಸರ ಅಧಿಕಾರಿ ಹುದ್ದಗೆ ದಿನಾಂಕ :01-10-2008 ರಂದು ಪದೋನ್ನತಿ ಹೊಂದಿದ್ದರೂ ಸಹ ಜೇಷ್ಠತೆಗಾಗಿ ದಿನಾಂಕ:03-10-2008 ನ್ನು ನಿಗಧಿಪಡಿಸಿರುವುದು ಜೇಷ್ಠತಾ ನಿಯಮಗಳಿಗೆ ವ್ಯತಿರಿಕ್ತವಾಗಿದೆ.

4. **ಇಂದ್ರಾ ಸಹಾನಿ ವಿರುದ್ದ ಯೂನಿಯನ್ ಆಫ್ ಇಂಡಿಯಾ** ತೀರ್ಪನ್ನು ಜಾರಿಗೊಳಿಸದೆ, ಸಂವಿಧಾನಕ್ಕೆ ತಿದ್ದುಪಡಿ ಮಾಡಿರುವ ಆಧಾರದ ಮೇಲೆ ಪವಿತ್ರ ವಿರುದ್ದ ಯೂನಿಯನ್ ಆಫ್ ಇಂಡಿಯಾ ತೀರ್ಪನ್ನು ಕೂಡಾ ಸಂವಿದಾನಕ್ಕೆ ತಿದ್ದುಪಡಿ ತರುವುದರ ಮುಖಾಂತರ ನ್ಯಾಯ ಒದಗಿಸಲು ಕೋರಲಾಗಿದೆ. ಈ ಹಿಂದೆ ಸರ್ವೋಚ್ಚನ್ಯಾಯಾಲಯವು ಇಂದ್ರಾ ಸಹಾನಿ ವಿರುದ್ದ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ನೇಮಕಾತಿಗಾಗಿ ಮಾತ್ರ ಮೀಸಲಾತಿ ಅನ್ವಯಿಸುವುದು, ಪದೋನ್ನತಿಗೆ ಮೀಸಲಾತಿ ಅನ್ವಯಿಸುವುದಿಲ್ಲ ಎಂದು ನೀಡಿರುವ ತೀರ್ಪನ್ನು ಭಾರತ ಸಂವಿಧಾನಕ್ಕೆ ಅನುಚ್ಛೇದ 16(4)ಮತ್ತು 16(4)(ಎ)ಸೇರಿಸುವುದರ ಮುಖಾಂತರ ಸದರಿ ತೀರ್ಪನ್ನು ಅನುಷ್ಠಾನಗೊಳಿಸದಿರಲು ನಿರ್ಣಯಿಸಲಾಗಿದೆ. ಇದರಿಂದ ಪವಿತ್ರರವರ ಪ್ರಕರಣದಲ್ಲಿ ಪದೋನ್ನತಿಯಲ್ಲಿ ಮೀಸಲಾತಿ ಇರಬೇಕೆಂಬ ಅಂಶವನ್ನು ಒತ್ತಿ ಹೇಳಲಾಗಿದೆ. ಆದರೆ ಜೇಷ್ಠತೆಗೆ ಮೀಸಲಾತಿಯಲ್ಲಿ ಪಡೆದ ಪದೋನ್ನತಿಯನ್ನು ಪರಿಗಣಿಸದೆ ಇರುವುದರಿಂದ , ಪರಿಶಿಷ್ಟ ಜಾತಿ/ಪಂಗಡದ ಆಧಾರದ ಮೇಲೆ ನೀಡಿರುವ ಪದೋನ್ನತಿಯನ್ನು ಕಿತ್ತುಕೊಂಡಂತಾಗಿದೆ.ಈ ತಾರತಮ್ಯವನ್ನು ಸರಿಪಡಿಸಲು ಸಂವಿಧಾನ ತಿದ್ದುಪಡಿಯ ವಿಧೇಯಕವು ರಾಜ್ಯಸಭೆಯಲ್ಲಿ ಅಂಗೀಕಾರವಾಗಿದ್ದು , ಲೋಕಸಭೆಯಲ್ಲಿ ವಿಧೇಯಕವನ್ನು ಅಂಗೀಕರಿಸಲು ಸರ್ಕಾರದ ವತಿಯಿಂದ ಕ್ರಮಜರುಗಿಸಲು ಕೋರಲಾಗಿದೆ.

5. **ಜೇಷ್ಠತೆಯಲ್ಲಿ ನನಗೆ ಆಗಿಂದಾಗ್ಗೆ ಅನ್ಯಾಯವಾಗಿದೆ.** ಕಛೇರಿ ಆದೇಶ ಸಂಖ್ಯೆ:ಮಾನಿಮ04ಆಡಎ07/2177, ದಿನಾಂಕ:13-09-2012ರಲ್ಲಿ ದಿನಾಂಕ:01-09-2012ರಿಂದ ಮುಖ್ಯ ಪರಿಸರ ಅಧಿಕಾರಿ ಹುದ್ದೆಯಲ್ಲಿ ಸ್ವತಂತ್ರ ಪ್ರಭಾರದಲ್ಲಿಡಲಾಯಿತು. ಇದರಿಂದ ನಾನು ದಿನಾಂಕ:03-09-2012 ರಿಂದ ಮುಖ್ಯ ಪರಿಸರ ಅಧಿಕಾರಿ ಹುದ್ದೆಗೆ ಪದೋನ್ನತಿ ಹೊಂದಲು ಅರ್ಹತೆ ಹೊಂದಿರುವುದು ಸಾಬೀತಾಗಿದೆ.ಆದರೆ ಈ ದಿನಾಂಕದವರೆಗೆ ನನಗೆ ಮುಖ್ಯ ಪರಿಸರ ಅಧಿಕಾರಿ ಹುದ್ದೆಯಲ್ಲಿ ಪದೋನ್ನತಿ ನೀಡದೆ, ಸ್ವತಂತ್ರ ಪ್ರಭಾರದಲ್ಲಿ ಮುಂದುವರಿಸಿರುವುದು ನಿಯಮಗಳಿಗೆ ವ್ಯತಿರಿಕ್ತವಾಗಿದೆ.ರಿಕ್ತವಿರುವ ಹುದ್ದೆಗಳಲ್ಲಿ ಅರ್ಹತೆ ಹೊಂದಿರುವ ನನಗೆ ಪದೋನ್ನತಿ

28/11/17
ಅಧ್ಯಕ್ಷರು
ಕ.ರಾ.ಮಾ.ನಿ.ಮಂ.

| | | | |
|---|---|---|---|
| | | ನೀಡಬೇಕಾಗಿದೆ.<br>6.**ಸರ್ಕಾರದ ಆದೇಶ ಸಂಖ್ಯೆ:ಡಿಪಿಎಆರ್ 86 ಎಸ್ಎಂಇ 2013,ದಿನಾಂಕ:16-05-2013 ರಲ್ಲಿ ಮಂಡಳಿಯ ಸದಸ್ಯ ಕಾರ್ಯದರ್ಶಿಯಾಗಿ ಪ್ರಭಾರದಲ್ಲಿ ಇಡಲಾಯಿತು.** ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 86 ಎಸ್ಎಂಇ 2013,ದಿನಾಂಕ:16-05-2013 ರಲ್ಲಿ ಮಂಡಳಿಯ ಸದಸ್ಯ ಕಾರ್ಯದರ್ಶಿಯಾಗಿ ಪ್ರಭಾರದಲ್ಲಿ ಇಡಲಾಯಿತು.ಇದರಿಂದ ನಾನು ದಿನಾಂಕ:16-05-2013 ರಿಂದ ಹೆಚ್ಚಿನ ಹುದ್ದೆಯ ಕರ್ತವ್ಯಗಳನ್ನು ನಿರ್ವಹಿಸಿದ್ದು ,ಮುಖ್ಯ ಪರಿಸರ ಅಧಿಕಾರಿಯ ಹುದ್ದಗೆ ಪದೋನ್ನತಿ ನೀಡದೇ ಇರುವುದು ನನಗೆ ಅನ್ಯಾಯವಾದಂತಾಗಿದೆ.<br>7. **ಪದೋನ್ನತಿಯನ್ನು ನೀಡಿದ ನಂತರ ಜೇಷ್ಠತೆಯನ್ನು ಕಡಿತಗೊಳಿಸಿರುವುದು, ಪದೋನ್ನತಿಯ ಹಕ್ಕನ್ನು ಕಸಿದುಕೊಂಡಂತಾಗಿದೆ.** ಪವಿತ್ರ ರವರ ಪ್ರಕರಣಕ್ಕಿಂತ ಪೂರ್ವದಲ್ಲಿ ,ಹಿರಿಯ ಪರಿಸರ ಅಧಿಕಾರಿ ಹುದ್ದೆಯಲ್ಲಿ ಜೇಷ್ಟತಾ ಸಂಖ್ಯೆ.1 ಇದ್ದು,ದಿನಾಂಕ:31-12-2012 ರಲ್ಲಿರುವಂತೆ ಮರುಪ್ರಕಟಿಸಿರುವ ಪರಿಸರ ಅಧಿಕಾರಿಗಳ ತಾತ್ಕಾಲಿಕ ಹಾಗೂ ಉಲ್ಲೇಖಿತ ಅಧಿಸೂಚನೆಯಲ್ಲಿ ಜೇಷ್ಟತಾ ಸಂಖ್ಯೆ.11ಕ್ಕೆ ಇಳಿಸಿರುವುದು ನನಗೆ ತೀವ್ರವಾದ ಅನ್ಯಾಯವೆಸಗಿದಂತಾಗಿದೆ. ಜೇಷ್ಟತೆಯನ್ನು ಕಡಿತಗೊಳಿಸುವುದರಿಂದ, ನನ್ನ ನಂತರದಲ್ಲಿ ಪದೋನ್ನತಿ ಹೊಂದಿರುವವರನ್ನು ನನ್ನ ಮೇಲೆ ಪ್ರತಿಷ್ಠಾಪಿಸಿರುವಂತಾಗಿದೆ. ಈ ಬಗ್ಗೆ ಕರ್ನಾಟಕ ಉಚ್ಚನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ .9245/1981, ದಿನಾಂಕ :02-02-1981 ರಂದು ನೀಡಿರುವ ತೀರ್ಪನ್ನು ಪರಿಗಣಿಸಲು ಕೋರಲಾಗಿದೆ. ಜೇಷ್ಟಾತೆಯನ್ನು ಕಡಿಮೆ ಮಾಡುವ ಪೂರ್ವದಲ್ಲಿ ಸೂಕ್ತ ಅವಕಾಶವನ್ನು ನೀಡಬೇಕಾಗುತ್ತದೆ. ಅಂದರೆ , ಕರ್ನಾಟಕ ರಾಜ್ಯವು ಪವಿತ್ರ ರವರ ತೀರ್ಪಿನ ಹಿನ್ನಲೇಯಲ್ಲಿ ಆದ್ಯಾದೇಶವನ್ನು ಪ್ರಸ್ತಾಪಿಸಿದ್ದು, ಅದರಲ್ಲಿರವ ಅಂಶಗಳನ್ನು ಪರಿಗಣಿಸಿ , ನನಗೆ ನ್ಯಾಯ ಒದಗಿಸಬೇಕಾಗಿದೆ.<br>ಮೇಲೆ ವಿವರಿಸಿರುವ ಕಾರಣಗಳಿಂದ ಹಿರಿಯ ಪರಿಸರ ಅಧಿಕಾರಿ ಹುದ್ದೆಗೆ ದಿನಾಂಕ: 01-10-2008 ರಿಂದ ಈ ಹಿಂದೆ ನಿಗಧಿಪಡಿಸಿದ್ದ ಜೇಷ್ಟತೆಯನ್ನು ಅಂದರೆ,ಶ್ರೀ.ಎಂ.ಎನ್ ಜಯಪ್ರಕಾಶ್ (ನಿವೃತ ಮುಖ್ಯ ಪರಿಸರ ಅಧಿಕಾರಿ) ಹುದ್ದೆಯ ತಕ್ಷಣದ ನಂತರ, ಮುಂದುವರಿಸಲು ಈ ಮೂಲಕ ಕೋರಲಾಗಿದೆ. | |

28/11/17

ಅಧ್ಯಕ್ಷರು

ಮಾ.ನಿ.ಮಂ